MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 31-1-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಭಾರತದಲ್ಲಿ ಕಾಳುಮೆಣಸು ಉತ್ಪಾದನೆ ಇಳಿಕೆ

ಈ ವರ್ಷ ಕಾಳುಮೆಣಸು ಬೆಳೆಯ ಕಟಾವು ಭಾರತದಲ್ಲಿ ಆರಂಭವಾಗಿದ್ದು ಉತ್ಪಾದನೆ ತೀವ್ರ ಇಳಿಕೆಯಾಗುವ ಸೂಚನೆಯಿದೆ. ಕೇರಳ ಸೇರಿದಂತೆ ಪ್ರಮುಖ ಉತ್ಪಾದನಾ ರಾಜ್ಯಗಳಲ್ಲಿ ಹೊಸಬೆಳೆಯ ಕಟಾವಿನ ಉತ್ಪಾದನೆ ಇಳಿಕೆಯಾಗುವ ಮಾಹಿತಿ ಕೃಷಿಕರಿಂದ ಲಭ್ಯವಾಗುತ್ತಿದೆ. ಪ್ರತಿಕೂಲ ಹವಾಮಾನ ಬೆಳೆಯ ಕಾಲದಲ್ಲಿ ವಿಪರೀತ ಮಳೆಯ ಹೆಚ್ಚಳವಾದ್ದರಿಂದ ಉತ್ಪಾದನೆ ಪ್ರಮಾಣ 50 ಶೇಕಡಾ ಇಳಿಕೆಯಾಗುವ ಸಾಧ್ಯತೆಯಿದೆ. ಮುಂದಿನ ಕೆಲವು ತಿಂಗಳ ನಂತರ ದರ ಹೆಚ್ಚಳವಾಗುವ ಸಾಧ್ಯತೆಗಳಿವೆ.

## ಭಾರತದ ರಫ್ತು ಅಕ್ಕಿ ದರ ಹೆಚ್ಚಳ

ಹಿಂದಿನ ಕೆಲವು ಸಮಯದಿಂದ ಭಾರತದ ಅಕ್ಕಿಯ ರಫ್ತು ದರ 10 ಶೇಕಡಾ ಕ್ಕೂ ಮೀರಿ ಹೆಚ್ಚಳವಾಗಿದೆಯೆನ್ನಲಾಗಿದೆ. ಎಫ್.ಸಿ.ಐ ಯ ಹಿಂದಿನ ವರ್ಷದ ಅಕ್ಕಿ ದಾಸ್ತಾನು ತೀವ್ರ ಇಳಿಕೆಯಿಂದಾಗಿ ಈ ವರ್ಷ ಹೆಚ್ಚಿನ ಪ್ರಮಾಣದ ಅಕ್ಕಿ(ಭತ್ತ) ಖರೀದಿ ಮಾಡುತ್ತಿದೆಯೆನ್ನಲಾಗಿದೆ. ಕನಿಷ್ಠ ಬೆಂಬಲ ದರ ಹೆಚ್ಚಳದಿಂದ ಹೆಚ್ಚಿನ ದರದಲ್ಲಿ ಖರೀದಿ ನಡೆಯಿತ್ತಿದೆಯೆನ್ನಲಾಗಿದ್ದು, ಖಾಸಗಿ ವಲಯವೂ ಹೆಚ್ಚಿನ ದರದಲ್ಲಿ ಖರೀದಿಸಬೇಕಾಗಿರುವುದರಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಜಾಗತಿಕ ಅಕ್ಕಿ ದರ (ಫಿಲಿಫೈನ್ಸ್, ವಿಯೆಟ್ನಾಂ ಮತ್ತಿತರ ರಫ್ತು ದೇಶ) ಹೆಚ್ಚಳವಾಗಿದ್ದು, ಜಾಗತಿಕ ಬೇಡಿಕೆಯೂ ಹೆಚ್ಚಳವಿದೆಯೆನ್ನಲಾಗಿದೆ.

## ಸೂರ್ಯಕಾಂತಿ ಎಣ್ಣೆ ಆಮದು ಹೆಚ್ಚಳ

ಸೂರ್ಯಕಾಂತಿ ಎಣ್ಣೆ ಆಮದು ಹೆಚ್ಚಳವಾಗುತ್ತಿದೆಯೆನ್ನಲಾಗಿದೆ. ಸ್ಪರ್ಧಾತ್ಮಕ ದರದಿಂದ ಆಮದು ಹೆಚ್ಚಳ ಕಂಡಿದೆಯೆನ್ನಲಾಗಿದೆ. ಸೋಯಾಬೀನ್ ಎಣ್ಣೆ ಆಮದು ಇಳಿಕೆಯಾಗಿ, ಸೂರ್ಯಕಾಂತಿ ಎಣ್ಣೆ ಆಮದು ಹೆಚ್ಚಳವಾಗಿದೆಯೆನ್ನಲಾಗಿದೆ.